# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ

ದೂರವಾಣಿ ಸಂ.:08472-263202 ಫ್ಯಾಕ್ಸ್: 08472-263206, ಇ-ಮೇಲ್: registrargug@rediffmail.com


KSURF ESTABLISHED UNIVERSITY OVERALL

ಕ್ರ.ಸಂ.ಗುವಿಕ/ವಿಮವಿ/ಪದವಿ/ಸಂಲಗ್ನತೆ/ಕ-1/2025-26/271 ದಿನಾಂಕ: 18.06.2025.

23

## ಅಧಿಸೂಚನೆ

ವಿಷಯ:- ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ವಿವೇಕಾನಂದ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜಮೆಂಟ್, ಕಲಬುರಗಿ, ಈ ಕಾಲೇಜಿಗೆ 2025-26ನೇ ಶೈಕ್ಷಣಿಕ ಸಾಲಿನಿಂದ ಬಿ.ಸಿ.ಎ ಕೋರ್ಸಿಗೆ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಮಾಡುವಂತೆ ಸಂಯೋಜನೆ ಕೋರಿರುವ ಬಗ್ಗೆ.

ಉಲ್ಲೇಖ:
1. ಸರಕಾರದ ಆದೇಶ ಸಂ: ಇಡಿ/29/ಯುಎನ್ಇ/2021 ದಿ: 12.02.2021.
2. ಸರಕಾರದ ಆದೇಶ ಸಂ: ಇಡಿ/212/ಯುಎನ್ಇ/2024, ಬೆಂಗಳೂರು ದಿ: 04.10.2024.
3. ಸಂಲಗ್ನತೆ ಅಧಿಸೂಚನೆ ಕ್ರ.ಸಂ: ಗುವಿಕ/ಸಂಲಗ್ನತೆ/2024-25/1130, ದಿನಾಂಕ: 05.11.2024.
4. ಸಂಲಗ್ನತೆ ಅಧಿಸೂಚನೆ ಕ್ರ.ಸಂ: ಗುವಿಕ/ಸಂಲಗ್ನತೆ/2024-25/1156, ದಿನಾಂಕ: 20.11.2024.
5. ಸ್ಥಾನಿಕ ವಿಚಾರಣಾ ಸಮಿತಿಗಳ ವರದಿ/ಶಿಫಾರಸ್ಸು ದಿನಾಂಕ: 12.12.2024.
6. ವಿದ್ಯಾವಿಷಯಕ್ ಪರಿಷತ್ ಸಭೆಯ ಒಪ್ಪಿಗೆ ದಿನಾಂಕ: 15.01.2025 ವಿಷಯ ಕ್ರಮಾಂಕ: 01
7. ಸಿಂಡಿಕೇಟ್ ಸಭೆಯ ಒಪ್ಪಿಗೆ ದಿನಾಂಕ: 16.01.2025, ವಿಷಯ ಕ್ರಮಾಂಕ: 01
8. ನಮ್ಮ ಆನ್‌ಲೈನ್ ನಲ್ಲಿ ಸಲ್ಲಿಸಿರುವ ಸಂಯೋಜನೆ ವರದಿ ಸಂಖ್ಯೆ: ಗುವಿಕ/ವಿಮವಿ/ಸಂಲಗ್ನತೆ/2024-25/1182, ದಿನಾಂಕ: 30.01.2025.

09. ಸರಕಾರದ ಆದೇಶ ಸಂಖ್ಯೆ: ಇಡಿ/48/ಯುಜಿವಿ/2025, ಬೆಂಗಳೂರು, ದಿನಾಂಕ: 09.06.2025.

10. ಕುಲಪತಿಗಳ ಅನುಮೋದನೆ ದಿನಾಂಕ: 17.06.2025.

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗುಲಬರ್ಗಾ ವಿಶ್ವವಿದ್ಯಾಲಯಲ್ಲಿ ಬರುವ **ವಿವೇಕಾನಂದ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜಮೆಂಟ್, ಕಲಬುರಗಿ.** ಈ ಕಾಲೇಜಿನಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಬಿ.ಸಿ.ಎ ಕೋರ್ಸಿಗೆ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಪ್ರಾರಂಭಿಸಲು ಸಂಯೋಜನೆ ನೀಡುವ ಕುರಿತು ಬಿ.ಸಿ.ಎ **180+50=230** ವಿದ್ಯಾರ್ಥಿ ಪ್ರಮಾಣ ಮೀರಿ ವಿದ್ಯಾರ್ಥಿಗಳ ಪ್ರವೇಶ ಪಡೆದರೆ ತಾವೇ ಹೊಣೆಗಾರರಾಗಿರುತ್ತಿರಿ, ಸಂಯೋಜನೆ ಕೋರಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(10)ರಡಿಯಲ್ಲಿ ಅಗತ್ಯವಾಗುವ ಸರ್ಕಾರದ ಶಿಫಾರಸ್ಸು ಕೋರಿ ಕಾಲೇಜಿನ ಅರ್ಜಿ, ಸ್ಥಳೀಯ ವಿಚಾರಣಾ ಸಮಿತಿಯ ವರದಿ ಹಾಗೂ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ತುಗಳ ಗೊತ್ತುವಳಿಗಳ ದಾಖಲೆಗಳೊಂದಿಗೆ ಸ್ಥಳೀಯ ವಿಚಾರಣಾ ಸಮಿತಿಯ ವರದಿ ಹಾಗೂ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ತುಗಳ ಗೊತ್ತುವಳಿಗಳ ದಾಖಲೆಗಳೊಂದಿಗೆ UUCMS ಆನ್‌ಲೈನ್ ತಂತ್ರಾಂಶದಲ್ಲಿ ಉಲ್ಲೇಖ(08)ರ ಸಂಯೋಜನಾ ವರದಿಯನ್ವಯ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಸರಕಾರ ಪರಿಶೀಲಿಸಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59 (18)ರ ಪರಂತುಕದಲ್ಲಿ ಉಪಬಂಧಿಸಿರುವಂತೆ, ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮಗಳು ಸೇರಿದಂತೆ ಇಂಜಿನಿಯರಿಂಗ್, ವಾಸ್ತುಶಿಲ್ಪ ಮತ್ತು ವ್ಯವಸ್ಥಾಪನೆ ಮುಂತಾದ ವೃತ್ತಿಪರ ವ್ಯಾಸಂಗ ಕ್ರಮಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ರಾಜ್ಯ ಸರ್ಕಾರವು ನಿರ್ಧರಿಸಬೇಕಾಗುತ್ತದೆ.

ಸ್ಥಳೀಯ ವಿಚಾರಣಾ ಸಮಿತಿಯ ಅವಲೋಕನ ಮತ್ತು ತೀರ್ಮಾನಗಳನ್ನು ಪರಿಗಣಿಸಿದ ತರುವಾಯ ಗುಲಬರ್ಗಾ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳು ಅಂಗೀಕರಿಸಿದ ಗೊತ್ತುವಳಿಗಳನ್ನು ಅನುಸರಿಸಿ ಹಾಗೂ ಶೈಕ್ಷಣಿಕ/ಭೌತಿಕ ಹಾಗೂ ನಾಗರಿಕ ಮೂಲಸೌಕರ್ಯಗಳ ಲಭ್ಯತೆ ಹಾಗೂ ಗುಣಮಟ್ಟದ ಕಾರ್ಯನಿರ್ವಹಣೆ ಚಟುವಟಿಕೆಗಾಗಿ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಲಾದ ನಿಯತಾಂಕಗಳು ಹಾಗೂ ಸೂಚ್ಯಾಂಕಗಳ ಪೂರೈಕೆಯನ್ನು ದೃಢಪಡಿಸಿಕೊಂಡು, ಷರತ್ತಿಗೊಳಪಟ್ಟು ಪ್ರಸ್ತಾವನೆಯನ್ನು ಉಲ್ಲೇಖ (09)ರ ಮೂಲಕ ಸರಕಾರ ಪರಿಗಣಿಸಿರುತ್ತದೆ.

ಆದುದರಿಂದ, ಉಲ್ಲೇಖ (09)ರ ಪತ್ರದನ್ವಯ **ವಿವೇಕಾನಂದ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜಮೆಂಟ್, ಕಲಬುರಗಿ, ಬಿ.ಸಿ.ಎ ಕೋರ್ಸಿಗೆ ವಿದ್ಯಾರ್ಥಿ ಪ್ರಮಾಣ ಹೆಚ್ಚಳ** 2025-26ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸಂಯೋಜನೆಯನ್ನು ಮಂಜೂರು ಮಾಡಿ ಶಿಫಾರಸ್ಸು ಮಾಡಿರುತ್ತದೆ. ಅದರನ್ವಯ KSU Act 2000 Clause 59(12)ರನ್ವಯ ಉಲ್ಲೇಖ(12)ರಲ್ಲಿ ನೀಡಲಾಗಿರುವ ಸರಕಾರದ ನಿರ್ದೇಶನದನ್ವಯ 2025-26ನೇ ಶೈಕ್ಷಣಿಕ ಸಾಲಿಗೆ ಅನ್ವಯಿಸಿ ಈ ಕೆಳಗಿನಂತೆ ಸಂಲಗ್ನತಾ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 59ನೇ ಕಲಂ ಹಾಗೂ 17ನೇ ಉಪಕಲಂನ ಮೇರೆಗೆ ಪ್ರದತ್ತವಾದ ಅಧಿಕಾರದಂತೆ 2025-26ನೇ ಶೈಕ್ಷಣಿಕ ಸಾಲಿಗಾಗಿ, **ಸಿ-416, ವಿವೇಕಾನಂದ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜಮೆಂಟ್, ಕಲಬುರಗಿ,** ಇವರಿಗೆ ಬಿ.ಸಿ.ಎ ಕೋರ್ಸಿಗೆ **ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಮಾಡಿದ್ದು** ಅದರ ಮುಂದೆ ನಮೂದಿಸಿದ ವಿಷಯಗಳನ್ನು 2025-26ನೇ ಸಾಲಿನ ಒಂದು ವರ್ಷದ ಕಾಲಾವಧಿವರೆಗೆ ಬೋಧಿಸುವದಕ್ಕಾಗಿ ಈ ಕೆಳಕಾಣಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸಬೇಕೆಂಬ ಕರಾರಿನೊಂದಿಗೆ ಸಂಲಗ್ನತೆ ಮುಂದುವರಿಕೆ ಮಂಜೂರಾತಿ ನೀಡಲಾಗಿದೆ.

| ಕಾಲೇಜು ಕೋಡ್ | ಪ್ರೋಗ್ರಾಮಗಳು | ಕೋರ್ಸಗಳು | | | ವಿದ್ಯಾರ್ಥಿಗಳ ನಿಗದಿತ ಪ್ರವೇಶ ಸಂಖ್ಯೆ |
|---|---|---|---|---|---|
| ಸಿ–416 | ಬಿ.ಸಿ.ಎ. SEP-2024 ( I, II & III Year) & ಬಿ.ಸಿ.ಎ. NEP-2020 ( II & III Year) | Ability Enhancement Compulsory Courses (AECC) | 1 | ಕನ್ನಡ, | 180+50=230 (ಎರಡು ನೂರಾ ಮೂವತ್ತು ಮಾತ್ರ) |
| | | | 2 | ಇಂಗ್ಲೀಷ | |
| | | | 3 | ಹಿಂದಿ | |
| | | | 4 | ಉರ್ದು | |
| | | Discipline Core Courses (DSC) | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | | |
| | ಬಿ.ಬಿ.ಎ. SEP-2024 ( I, II & III Year) & ಬಿ.ಬಿ.ಎ. NEP-2020 ( II & III Year) | Ability Enhancement Compulsory Courses (AECC) | 1 | ಕನ್ನಡ, | 180 (ಒಂದು ನೂರಾ ಎಂಬತ್ತು ಮಾತ್ರ) |
| | | | 2 | ಇಂಗ್ಲೀಷ | |
| | | | 3 | ಹಿಂದಿ | |
| | | | 4 | ಉರ್ದು | |
| | | Discipline Core Courses (DSC) | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | | |
| | ಬಿ.ಕಾಂ. SEP-2024 ( I, Year) & ಬಿ.ಕಾಂ. SEP-2024 ( II & III Year) | Ability Enhancement Compulsory Courses (AECC) | 1 | ಕನ್ನಡ, | 180 (ಒಂದು ನೂರಾ ಎಂಬತ್ತು ಮಾತ್ರ) |
| | | | 2 | ಇಂಗ್ಲೀಷ | |
| | | | 3 | ಹಿಂದಿ | |
| | | | 4 | ಉರ್ದು | |
| | | Discipline Core Courses (DSC) | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | | |
| ಸಾಮಾನ್ಯ ವರ್ಗ (**General Mangement**) ಅನುದಾನರಹಿತ (**Unaded College**) | **Affiliation Score: 57.17+** | | | | |

**ಪ್ರವೇಶಾವಕಾಶ ಸಂಖ್ಯೆಯಲ್ಲಿನ ಪೂರ್ವ ಪ್ರಸ್ತಾಪಿತ ಏರಿಕೆಯು ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

**ಸರಕಾರದವರು ವಿಧಿಸಿದ ಷರತ್ತುಗಳು:**

1. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿನ ಬಿ.ಸಿ. ಎ ಕೋರ್ಸಿನ ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅವುಗಳನ್ನು ಶಾಶ್ವತ ಅನುದಾನರಹಿತ ಕೋರ್ಸು ಎಂದು ಪರಿಗಣಿಸತಕ್ಕದ್ದು.
2. ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
3. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
4. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. ಸ್ಥಳೀಯ ವಿಚಾರಣಾ ಸಮಿತಿಯು ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
6. ಮೇಲ್ಕಂಡ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಪ್ರಕಾರವೇ ಪಡೆಯತಕ್ಕದ್ದು.
7. ಕಾಲೇಜು/ಆಡಳಿತ ಮಂಡಳಿಯು ಶೇ. 50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು ( ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ.
8. ದಿನಾಂಕ: 13.08.1997 ರಂದು ವಿಶಾಖ V/S ರಾಜಸ್ತಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿ ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು. ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸತಕ್ಕದ್ದು, ಮುಂದುವರೆದು ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು, ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.
9. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು, ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.
10. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ.

11. ಕಾಲೇಜಿನ ಆಡಳಿತ ಮಂಡಳಿಯು ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.
12. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
13. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
14. ವಿಶ್ವವಿದ್ಯಾಲಯವು ಆನ್‌ಲೈನ್ ಮೂಲಕ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ LIC ಕಮಿಟಿಯು ನೀಡಿರುವ ವರದಿಯಲ್ಲಿನ ಎಲ್ಲ ಶಿಫಾರಸ್ಸುಗಳನ್ನು ಇದೇ ಶೈಕ್ಷಣಿಜ ಸಾಲಿನಲ್ಲಿ ಪೂರೈಸತಕ್ಕದ್ದು.
15. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಲ್ಲಿನ ಮಾನದಂಡಗಳು ಹಾಲಿ ಇರುವ ಕೋರ್ಸಿನ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಹೆಚ್ಚಿಸುವ ಕುರಿತು ಸಂಯೋಜನೆ ನೀಡುವ ಸಂಬಂಧ ಸರ್ಕಾರದಿಂದ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಸಂಬಂಧಿಸಿದ ಕಾಲೇಜು ಪಾಲಿಸಿದೆಯೇ ಎಂಬುದರ ಕುರಿತಾಗಿ ವಿಶ್ವವಿದ್ಯಾಲಯವು ಖಚಿತ ಪಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಿಶ್ವವಿದ್ಯಾಲಯವು ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.
16. ಸರ್ಕಾರದ ಆದೇಶ ಸಂಖ್ಯೆ: ED/29/UNE/2021, dated: 12.02.2021 ಮತ್ತು ED/218/UNE/2020, dated: 24.02.2020, ರಲ್ಲಿನ ಷರತ್ತುಗಳನ್ನು ಹಾಗೂ ಬಿ.ಸಿ.ಎ ಕೋರ್ಸಿನ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಹೆಚ್ಚಿಸುವ ಕುರಿತು ಸಂಬಂಧಿಸಿದ ಸಂಸ್ಥೆಯ AICTE ಯಿಂದ 06 (ಆರು) ತಿಂಗಳೊಳಗಾಗಿ EOA ಪಡೆಯುವ ಷರತ್ತಿಗೊಳಪಟ್ಟಿದೆ.
17. ಮೇಲ್ಕಂಡ ಷರತ್ತುಗಳನ್ನು ಪಾಲಿಸಲು ತಪ್ಪಿದಲ್ಲಿ ಬಿ.ಸಿ.ಎ ಕೋರ್ಸುಗಳಿಗೆ ನೀಡಲಾಗಿರುವ ಅನುಮತಿಯು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತವೆ.

1. ಸ್ಥಾನಿಕ ವಿಚಾರಣಾ ಸಮಿತಿಯ ಶಿಫಾರಸ್ಸು:

**ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಸ್ಥಾನಿಕ ವಿಚಾರಣಾ ಸಮಿತಿಯು ಸಂಲಗ್ನತೆ ಮುಂದುವರಿಕೆಗೆ ಶಿಫಾರಸ್ಸು ಮಾಡಲಾಗಿದೆ.**

2. ಸ್ಥಾನಿಕ ವಿಚಾರಣಾ ಸಮಿತಿಯ ಷರತ್ತುಗಳು::

**B.C.A., B.Com& B.B.A Programmes:.**

1. Steps for appointment of permamant Teaching and Non Teaching without contract.
2. Library has to be strengthen with reference books and journals.

20/6/25

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಗೆ,
ಪ್ರಾಂಶುಪಾಲರು,
ಸಿ-416, ವಿವೇಕಾನಂದ ಇನ್ಸ್‌ಟ್ಯೂಟ್
ಆಫ್ ಮ್ಯಾನೇಜಮೆಂಟ್, ಕಲಬುರಗಿ.

ಪ್ರತಿಗಳು:

1. ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಕಲಬುರಗಿ.
4. ಕುಲಸಚಿವರು (ಮೌಲ್ಯಮಾಪನ) ಗು.ವಿ. ಕಲಬುರಗಿ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಗು.ವಿ. ಕಲಬುರಗಿ.
6. ವಿಶೇಷಾಧಿಕಾರಿಗಳು, ವಿದ್ಯಾಮಂಡಲ/ಅಭಿವೃದ್ಧಿ/ಆಡಳಿತ/ಹಣಕಾಸು, ಗು.ವಿ. ಕಲಬುರಗಿ.
7. ವಿಷಯ ನಿರ್ವಾಹಕರು, ಅರ್ಹತಾ ಪತ್ರ ಶಾಖೆ ವಿದ್ಯಾಮಂಡಲ ವಿಭಾಗ, ಗು.ವಿ. ಕಲಬುರಗಿ.